ಮೂಲ ದಾವಾ ನಂಃ 30/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **12-07-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ.ಟಿ.ವಾಯ್ 5 ನೇ ಪ್ರತಿವಾದಿ ಪರ ವಕೀಲರಿಂದಃ**

ನಮ್ಮ ಕುಟುಂಬದ ಮೂಲ ಪುರುಷ ಈರಯ್ಯ ನಾಯ್ಕ. ಈರಯ್ಯ ಅವರಿಗೆ 5 ಜನ ಗಂಡು ಮಕ್ಕಳಿದ್ದಾರೆ, ಅವರಿಗೆ ಹೆಣ್ಣು ಮಕ್ಕಳು ಇರುವುದಿಲ್ಲ.

ದಾವಾ ಸ್ಥಳಗಳು ಒಟ್ಟು ಕುಟುಂಬದ ಆಸ್ತಿಗಳಾಗಿವೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿ ಪ್ರತಿವಾದಿಯರು ನನ್ನ ತಂದೆಯ ಕಾಲದಿಂದ ಸಾಗುವಳಿ ಮಾಡುತ್ತಾ ಬಂದಿರುವ ಬಗ್ಗೆ ನನಗೆ ಮಾಹಿತಿ ಇದೆ. ವಾದಿ ಪ್ರತಿವಾದಿಯರಾದ ನಾವುಗಳು 1996 ನೇ ಸಾಲಿನಿಂದ ತೊಂಡಿ ವಾಂಟಣಿ ಮಾಡಿಕೊಂಡು ದಾವಾ ಸ್ಥಳಗಳ ಸಾಗುವಳಿ ಮಾಡುತ್ತಾ ಬಂದಿರುತ್ತೇವೆ. ತೊಂಡಿ ವಾಂಟಣಿ ಮಾಡಿಕೊಂಡ ಕುರಿತಾಗಿ ನಮ್ಮ ಹತ್ತಿರ ಯಾವುದೇ ದಾಖಲೆಗಳು ಇರುವುದಿಲ್ಲ. ನಮ್ಮ ಮುತ್ತಜ್ಜನಾದ ಈರಯ್ಯರವರ ಮಕ್ಕಳ ಹೆಸರಿಗೆ ದಾವಾ ಸ್ಥಳಗಳು ಡಿಕ್ಲೇರೇಷನ್ ಆದ ಬಗ್ಗೆ ನಮ್ಮ ಹತ್ತಿರ ತೀರ್ಪಿನ ಪ್ರತಿಗಳು ಇವೆ.

ನಮ್ಮ ಕುಟುಂಬದ ಖರ್ಚುವೆಚ್ಚುಗಳನ್ನೆಲ್ಲ ನಮ್ಮ ಮುತ್ತಜ್ಜ ನೋಡಿಕೊಳ್ಳುತಿದ್ದರು ಎಂಬ ನನಗೆ ಮಾಹಿತಿ ಇಲ್ಲ. ನಮ್ಮ ಅಜ್ಜನಾದ ದೇವಪ್ಪನಿಗೆ ಮದುವೆಯಾದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ವಾದಪತ್ರದಲ್ಲಿ ನಾವು ಮೃತ ದೇವಪ್ಪ ಈರಯ್ಯ ನಾಯ್ಕ ಈತನು ಅವಿವಾಹಿತ ಎಂದು ದಾಖಲಿಸಿದ್ದೇವೆ ಎಂದರೆ ಸರಿ.

ಮೃತ ದೇವಪ್ಪ ಈರಯ್ಯ ನಾಯ್ಕ ಈತನು ತನ್ನ ಅಂಶವಾರಿ ಹಕ್ಕನ್ನು 5 ನೇ ಪ್ರತಿವಾದಿಗೆ ವಿಲ್ ನಾಮೆಯ ಮೂಲಕ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ 5 ನೇ ಪ್ರತಿವಾದಿಯ ಹೆಸರು ಸದರಿ ದೇವಪ್ಪ ಈತನು ಅಂಶವಾರಿ ಹಕ್ಕಿಗೆ 5 ನೇ ಪ್ರತಿವಾದಿಯ ಹೆಸರು ರೇಕಾರ್ಡಗಳಲ್ಲಿ ನಮೂದಾಗಿದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ.

ನಮ್ಮ ಒಟ್ಟು ಕುಟುಂಬದ ಆಸ್ತಿಯಲ್ಲಿ ಅಂದಾಜು 20-30 ಗುಂಟೆ ಕ್ಷೇತ್ರವು ರಾಷ್ಟ್ರೀಯ ಹೆದ್ದಾರಿಗಾಗಿ ಹೋಗಿತ್ತು ಎಂದರೆ ಸರಿ. ಸದರಿ ಕ್ಷೇತ್ರದ ಕುರಿತಾಗಿ ನಾವು ಪರಿಹಾರವನ್ನು ಪಡೆದಿದ್ದು ಇರುವುದಿಲ್ಲ.

ಮಂಕಿ ಗ್ರಾಮದ ಸರ್ವೇ ನಂಬರ್ 852 1 ಅ, ಸರ್ವೇ ನಂಬರ್ 852 1 ಕ, 1ಡ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ.

ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಹಾಗೂ 1 ,10 ರಿಂದ 15 ನೇ ಪ್ರತಿವಾದಿಯರಿಗೆ 1/5 ಅಂಶ ಹಕ್ಕಿದೆ ಎಂದರೆ ಸರಿ. ಮೃತ ದೇವಪ್ಪ ಈತನ 1/5 ಅಂಶ ಹಕ್ಕು 5 ನೇ ಪ್ರತಿವಾದಿಗೆ ವಿಲ್ ನಾಮೆಯ ಮೂಲಕ ಹೋಗಿದೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.